ಕರ್ನಾಟಕ ಸರ್ಕಾರ

(ಜಿಲ್ಲಾ ನಗರಾಭಿವೃದ್ಧಿ ಕೋಶ)

ಸಂಖ್ಯೆ: ಎಂಯುಎನ್(1)153/2016-17

ಜಿಲ್ಲಾಧಿಕಾರಿಗಳ ಕಛೇರಿ
ಮಂಡ್ಯ ಜಿಲ್ಲೆ
ಮಂಡ್ಯ ದಿನಾಂಕ:09-11-2016

**"ಅಧಿಸೂಚನೆ"**

ಮಂಡ್ಯ ಜಿಲ್ಲೆಯ ಕೆಳಕಂಡ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಕಿರಿಯ ಅಭಿಯಂತರರ ಹುದ್ದೆಗಳಿಗೆ ತಾತ್ಕಾಲಿಕವಾಗಿ ಯೋಜನಾ ನಿರ್ವಹಣಾ ಸಮಾಲೋಚಕರ (ಪಿಎಂಸಿ) ಮುಖಾಂತರ ಅಥವಾ ನಿವೃತ್ತಿ ಅಭಿಯಂತರರುಗಳಿಂದ ಭರ್ತಿ ಮಾಡಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಿದ್ದು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

| ಕ್ರ.ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1 | **ಪುರಸಭೆ, ಮಳವಳ್ಳಿ** | 02 |
| 2 | **ಪುರಸಭೆ, ಮದ್ದೂರು** | 01 |
| 3 | **ಪುರಸಭೆ, ಪಾಂಡವಪುರ** | 01 |

**ಈ ಕೆಳಕಂಡ ಷರತ್ತಿಗೊಳಪಟ್ಟು ಭರ್ತಿ ಮಾಡಿಕೊಳ್ಳಲಾಗುವುದು.**

1. ನಿವೃತ್ತ ಕಿರಿಯ ಅಭಿಯಂತರರು ರಾಜ್ಯ ಸರ್ಕಾರ/ರಾಜ್ಯ ಸರ್ಕಾರಿ ಸ್ವಾಮ್ಯದ ಅಥವಾ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿರಬೇಕು. ಈ ಸಂಬಂಧ ನಿವೃತ್ತ ದಾಖಲಾತಿಗಳನ್ನು ಮನವಿಗಳೊಂದಿಗೆ ಲಗತ್ತಿಸರಬೇಕು.
2. ಅರ್ಜಿದಾರರ ವಯೋಮಿತಿ 60 ರಿಂದ 65 ವರ್ಷಗಳವರೆಗೆ ಇರಬೇಕು. (65 ವರ್ಷ ಮೀರಿರಬಾರದು)
3. ಇವರುಗಳ ವಿರುದ್ಧ ಇಲಾಖಾ ಅಥವಾ ನ್ಯಾಯಾಂಗ ವಿಚಾರಣೆ ಬಾಕಿ ಇರಬಾರದು ಅಥವಾ ವಿಚಾರಣೆ ಅಂತಿಮಗೊಂಡ ನಂತರ ಯಾವುದೇ ದಂಡನೆಗೆ ಒಳಪಟ್ಟಿರಬಾರದು.
4. ಆಯ್ಕೆಯಾಗುವ ನಿವೃತ್ತ ಅಭಿಯಂತ್ರರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 313, 314, 315, 316ರ ಮೇರೆಗೆ ಮಾಸಿಕ ವೇತನ ನಿಗಧಿಪಡಿಸಿ ಪಾವತಿ ಮಾಡಲಾಗುವುದು.
5. ಈ ಪುನರ್ ನೇಮಕಾತಿಯು ತಾತ್ಕಾಲಿಕವಾಗಿ 12 ತಿಂಗಳ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ. ಈ ಮಧ್ಯೆ ಸದರಿ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಆದಂತಹ ಅಭ್ಯರ್ಥಿಗಳು, ಅಥವಾ ವರ್ಗಾವಣೆ ಮುಂಬಡ್ತಿ ಮೂಲಕ ಭರ್ತಿ ಮಾಡಿ ಸದರಿಯವರು ಹಾಜರಾಗುವವರೆಗೆ, ಯಾವುದು ಮುಂಚೆಯೋ ಅಲ್ಲಿಯವರೆಗೆ ಮಾತ್ರ ಸೀಮಿತವಾಗಿರುತ್ತದೆ.
6. ಪುನರ್ ನೇಮಕಾತಿಗೆ ಆಯ್ಕೆಯಾದಂತಹ ನಿವೃತ್ತ ಕಿರಿಯ ಅಭಿಯಂತರರು ಕರ್ತವ್ಯಕ್ಕೆ ಹಾಜರಾಗುವ ಮುನ್ನ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
7. ಪುನರ್ ನೇಮಕಾತಿಗೆ ಆಯ್ಕೆಯಾದ ಬಳಿಕ ಯಾವ ಸ್ಥಳದಲ್ಲಿ ನಿಯುಕ್ತಿಗೊಳಿಸಲಾಗುತ್ತದೆಯೋ ಆ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕು. ಯಾವುದೇ ಬದಲಾವಣೆಗೆ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.
8. ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷತೆ/ದುರ್ವರ್ತನೆಯಿಂದ ವರ್ತಿಸಿದಲ್ಲಿ ಅಥವಾ ಮೇಲಧಿಕಾರಿಗಳು/ಕಚೇರಿ ಮುಖ್ಯಸ್ಥರು ನೀಡುವ ಸೂಚನೆ ಮತ್ತು ಸಲಹೆಗಳನ್ನು ಪಾಲಿಸದೇ ಇದ್ದಲ್ಲಿ ಈ ಸಂಬಂಧ ನಗರ ಸ್ಥಳೀಯ ಸಂಸ್ಥೆಗಳಿಂದ ವರದಿ ಸ್ವೀಕೃತಿಯಾದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಕರ್ತವ್ಯದಿಂದ ತೆಗೆದುಹಾಕಲಾಗುವುದು. ಇದಕ್ಕಾಗಿ ಯಾವುದೇ ಪರಿಹಾರ ಧನ ನೀಡಲಾಗುವುದಿಲ್ಲ.
9. ಈ ಪುನರ್ ನೇಮಕಾತಿ ಸಂಬಂಧಿಸಿದಂತೆ ಅಥವಾ ಕಾರ್ಯನಿರ್ವಹಣೆ ಬಗ್ಗೆ ಇನ್ನಾವುದೇ ಅಂಶಗಳಿಗೆ ಸರ್ಕಾರದಿಂದಾಗಲೀ, ಪೌರಾಡಳಿತ ನಿರ್ದೇಶನಾಲಯದಿಂದಾಗಲೀ ಅಥವಾ ಜಿಲ್ಲಾಧಿಕಾರಿಗಳಿಂದಾಗಲೀ ಕಾಲಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

ಅರ್ಜಿ ನಮೂನೆಯನ್ನು www.mandya.nic.in ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ, ಮಂಡ್ಯ ಇಲ್ಲಿ ಸಂಪರ್ಕಿಸಬಹುದಾಗಿದೆ. ನಿಗಧಿತ ಅರ್ಜಿ ನಮೂನೆಯನ್ನು ಸಲ್ಲಿಸಲು ಕೊನೆಯ ದಿನಾಂಕ:25.11.2016 (ದೂರವಾಣಿ ಸಂಖ್ಯೆ:08232-231111.)

ಜಿಲ್ಲಾಧಿಕಾರಿ
ಮಂಡ್ಯ ಜಿಲ್ಲೆ, ಮಂಡ್ಯ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಪೌರ ಸೇವಾ ವೃಂದದ ಕಿರಿಯ/ಸಹಾಯಕ ಅಭಿಯಂತರರ ಖಾಲಿ ಇರುವ ಹುದ್ದೆಗಳನ್ನು ನಿವೃತ್ತ ಅಭಿಯಂತರರುಗಳನ್ನು ಪುನರ್ ನೇಮಕಾತಿ ಮಾಡುವ ಮೂಲಕ ತಾತ್ಕಾಲಿಕವಾಗಿ ಭರ್ತಿ ಮಾಡುವ ಬಗ್ಗೆ.

ಓದಲಾಗಿದೆ:
1. ಮಾನ್ಯ ಮುಖ್ಯಮಂತ್ರಿಗಳು ದಿನಾಂಕ. 17.08.2016 ರ ಸಭೆಯಲ್ಲಿ ನೀಡಿರುವ ಸೂಚನೆ.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ಏಕ ಕಡತ ಸಂಖ್ಯೆ: 16724/ಡಿಎಂಎ/33/ENGSM/2016.
3. ಸರ್ಕಾರದ ಪತ್ರ ಸಂಖ್ಯೆ ನಅಇ 106 ಎಂಎಲ್‌ಆರ್ 2016 ದಿನಾಂಕ.04.10.2016.

******

**ಪ್ರಸ್ತಾವನೆ:**

ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರು ದಿನಾಂಕ. 17.08.2016 ರಂದು ನಗರಾಭಿವೃದ್ಧಿ ಇಲಾಖೆಯ ಹಾಗೂ ಪೌರಾಡಳಿತ ಇಲಾಖೆಯ ವ್ಯಾಪ್ತಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿರ್ವಹಿಸಬೇಕಾದ ಕಾಮಗಾರಿಗಳ ಪ್ರಗತಿ ತುಂಬಾ ಕುಂಠಿತವಾಗಿರುವುದನ್ನು ಗಮನಿಸುತ್ತಾ, ಇದಕ್ಕೆ ಮೂಲ ಕಾರಣ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಕಿರಿಯ/ ಸಹಾಯಕ ಅಭಿಯಂತರರುಗಳ ಹುದ್ದೆಗಳ ಕೊರತೆ ಎಂದು ಸಭೆಯಲ್ಲಿ ಗಮನಿಸಲಾಯಿತು ಮತ್ತು ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಮಾಡುವವವರೆಗೆ, ನಿವೃತ್ತಿ ಹೊಂದಿರುವ ಅಭಿಯಂತರರುಗಳಿಂದ ಭರ್ತಿ ಮಾಡಿದ್ದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪೂರಕವಾಗುತ್ತದೆ ಎಂಬ ವಿಷಯವನ್ನು ಮನಗಂಡು, ತಕ್ಷಣವೇ ಖಾಲಿ ಇರುವ ಕಿರಿಯ/ಸಹಾಯಕ ಅಭಿಯಂತರರುಗಳ ಹುದ್ದೆಗಳನ್ನು ತುಂಬಲು ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರಿಗೆ ಸೂಚಿಸಲಾಯಿತು.

R
28/10/16

ಈ ಹಿನ್ನೆಲೆಯಲ್ಲಿ ಖಾಲಿ ಇರುವ ಕಿರಿಯ/ಸಹಾಯಕ ಅಭಿಯಂತರರುಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಏಕ ಕಡತದಲ್ಲಿ, ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯರವರು, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನಿವೃತ್ತ ಅಭಿಯಂತರರುಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಸರ್ಕಾರಕ್ಕೆ ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟು 487 ಕಿರಿಯ ಅಭಿಯಂತರರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ಕೇವಲ 223 ಕಿರಿಯ ಅಭಿಯಂತರರುಗಳು ಕಾರ್ಯ ನಿರ್ವಹಿಸುತ್ತಿದ್ದು, ಒಟ್ಟು 264 ಹುದ್ದೆಗಳು ಖಾಲಿ ಇದ್ದು, ಈ ಪೈಕಿ 68 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯು ಸಹಮತಿ ನೀಡಿರುತ್ತದೆ. ಬಾಕಿ ಉಳಿದ 196 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಂದುವರೆದು, ಒಟ್ಟು 57 ಸಹಾಯಕ ಅಭಿಯಂತರರ ಹುದ್ದೆಗಳ ಪೈಕಿ 28 ಸಹಾಯಕ ಅಭಿಯಂತರ ಹುದ್ದೆಗಳು ಖಾಲಿ ಇದ್ದು, ಈ ಪೈಕಿ 12 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯು ಸಹಮತಿ ನೀಡಿರುತ್ತದೆ. ಬಾಕಿ ಉಳಿದ 16 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಕಿರಿಯ/ಸಹಾಯಕ ಅಭಿಯಂತರರುಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಪರಿಶೀಲಿಸಲಾಗಿ, ಖಾಲಿ ಇರುವ 264 ಕಿರಿಯ ಅಭಿಯಂತರರ ಪೈಕಿ 68 ಹುದ್ದೆಗಳಿಗೆ ಮತ್ತು 28 ಸಹಾಯಕ ಅಭಿಯಂತರರ ಹುದ್ದೆಗಳ ಪೈಕಿ 12 ಹುದ್ದೆಗಳಿಗೆ ಮಾತ್ರ, ಆರ್ಥಿಕ ಇಲಾಖೆಯು ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿಯಾಗುವವರೆಗೆ, ನಿವೃತ್ತ ಅಭಿಯಂತರರಿಂದ ಭರ್ತಿ ಮಾಡಿಕೊಳ್ಳಲು ಸಹಮತಿ ನೀಡಿರುತ್ತದೆ. ಆರ್ಥಿಕ

ಇಲಾಖೆಯು ನಿವೃತ್ತ ಅಭಿಯಂತರರ ನೇಮಕಾತಿಯನ್ನು ಕೇವಲ ನೇರ ನೇಮಕಾತಿ ಅಡಿಯಲ್ಲಿ ಭರ್ತಿ ಮಾಡುವ ಪ್ರಕ್ರಿಯಲ್ಲಿರುವ ಹುದ್ದೆಗಳನ್ನು ಮಾತ್ರ ಪರಿಗಣಿಸಿರುವುದು ಕಂಡುಬರುತ್ತದೆ. ಆದರೆ ವಾಸ್ತವಾಂಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಿರಿಯ ಅಭಿಯಂತರರ ಹುದ್ದೆಗಳು ಖಾಲಿ ಇರುವುದು ಕಂಡುಬರುತ್ತದೆ.

ಮುಂದುವರೆದು, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 17.08.2016ರಂದು ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಿರಿಯ/ಸಹಾಯಕ ಅಭಿಯಂತರರ ಖಾಲಿ ಹುದ್ದೆಗಳನ್ನು (ನೇರ ನೇಮಕಾತಿ/ಮುಂಬಡ್ತಿ ಒಳಗೊಂಡಂತೆ) ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಮೂಲಕ ಭರ್ತಿಯಾಗುವವರೆಗೆ ಹಾಗೂ ಮುಂಬಡ್ತಿ/ನಿಯೋಜನೆ ಮೂಲಕ ಭರ್ತಿ ಮಾಡುವವರೆಗೆ ಅಥವಾ ಒಂದು ವರ್ಷದ ಅವಧಿಯವರೆಗೆ, ಖಾಲಿ ಇರುವ ಹುದ್ದೆಗಳನ್ನು ನಿವೃತ್ತ ಅಭಿಯಂತರರುಗಳಿಂದ ಅಥವಾ ಯೋಜನಾ ನಿರ್ವಹಣಾ ಸಮಾಲೋಚಕರ (PMC) ಮುಖಾಂತರ ಭರ್ತಿ ಮಾಡಲು ಸೂಚಿಸಿರುತ್ತಾರೆ.

ಆರ್ಥಿಕ ಇಲಾಖೆಯ ಸಹಮತಿಯಂತೆ ಹುದ್ದೆಗಳನ್ನು ತುಂಬಿದಲ್ಲಿ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಹುದ್ದೆಗಳು ಖಾಲಿ ಉಳಿಯುವುದರಿಂದ, ಮಾನ್ಯ ಮುಖ್ಯಮಂತ್ರಿಗಳ ಸೂಚನೆಯು ಈಡೇರಿಸಿದಂತೆ ಆಗದ ಪ್ರಯುಕ್ತ, ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಅವಶ್ಯಕತೆ ಇರುವುದರಿಂದ, ಜಿಲ್ಲಾಧಿಕಾರಿಗಳಿಗೆ ನಿವೃತ್ತ ಕಿರಿಯ/ಸಹಾಯಕ ಅಭಿಯಂತರರುಗಳಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸಹಮತಿ ನೀಡಬಹುದಾಗಿದೆ.

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರುರವರು ಆರ್ಥಿಕ ಇಲಾಖೆಯು ಸಹಮತಿಸಿರುವಂತೆ, 68 ಕಿರಿಯ ಅಭಿಯಂತರರ ಹುದ್ದೆಗಳನ್ನು ಮತ್ತು 12 ಸಹಾಯಕ ಅಭಿಯಂತರರ ಹುದ್ದೆಗಳನ್ನು ಗುರುತಿಸಿದ್ದು ಮತ್ತು ಇನ್ನೂ ಬಾಕಿ ಇರುವ ಖಾಲಿ ಹುದ್ದೆಗಳನ್ನು ಜಿಲ್ಲಾಧಿಕಾರಿಗಳು ಗುರುತಿಸಿ, ನಿವೃತ್ತ ಕಿರಿಯ/ಸಹಾಯಕ ಅಭಿಯಂತರರುಗಳಿಂದ ಪುನರ್ ನೇಮಕಾತಿಯನ್ನು ಮಾಡಿಕೊಳ್ಳುವುದು ಸೂಕ್ತವೆಂದು ಭಾವಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ನಅಇ 106 ಎಂಎಲ್‌ಆರ್ 2016, ದಿನಾಂಕ:28-10-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಸೇವಾ ಆಯೋಗದಿಂದ ಹುದ್ದೆಗಳ ಭರ್ತಿಯಾಗುವವರೆಗೆ ಅಥವಾ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ, ಸಂಬಂಧಿಸಿದ ಜಿಲ್ಲಾಧಿಕಾರಿಗಳು, ತಮ್ಮ ಜಿಲ್ಲೆಯಲ್ಲಿ ಖಾಲಿ ಇರುವಂತಹ ಪೌರ ಸೇವಾ ವೃಂದದ ಕಿರಿಯ/ಸಹಾಯಕ ಅಭಿಯಂತರರ ಹುದ್ದೆಗಳನ್ನು ಯೋಜನಾ ನಿರ್ವಹಣಾ ಸಮಾಲೋಚಕರ (PMC) ಮುಖಾಂತರ ಅಥವಾ ನಿವೃತ್ತ ಅಭಿಯಂತರರುಗಳಿಂದ ಭರ್ತಿ ಮಾಡಲು ಈ ಕೆಳಕಂಡ ಷರತ್ತಿಗೊಳಪಟ್ಟು ಕ್ರಮವಹಿಸತಕ್ಕದ್ದು.

**ಷರತ್ತುಗಳು:**

1. ನೇಮಕಾತಿ ಮಾಡಿಕೊಳ್ಳುವಾಗ ಜಿಲ್ಲಾಧಿಕಾರಿಗಳು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆವಾರು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕಿರಿಯ/ಸಹಾಯಕ ವೃಂದದಡಿ ಮಂಜೂರಾಗಿರುವ ಹುದ್ದೆಗಳ ಪೈಕಿ, ಖಾಲಿ ಹುದ್ದೆಯನ್ನು ಖಚಿತಪಡಿಸಿಕೊಂಡು ಯಾವುದೇ ನಕಲು ನೇಮಕಾತಿ ಆಗದಂತೆ ಕ್ರಮವಹಿಸತಕ್ಕದ್ದು.
2. ನಿವೃತ್ತ ಕಿರಿಯ/ಸಹಾಯಕ ಅಭಿಯಂತರರು ರಾಜ್ಯ ಸರ್ಕಾರ/ರಾಜ್ಯ ಸರ್ಕಾರಿ ಸ್ವಾಮ್ಯದ ಅಥವಾ ರಾಜ್ಯದ ನಗರಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿರಬೇಕು. ಈ ಸಂಬಂಧ ನಿವೃತ್ತಿ ದಾಖಲಾತಿಗಳನ್ನು ಮನವಿಗಳೊಂದಿಗೆ ಲಗತ್ತಿಸಿರಬೇಕು.
3. ಇವರುಗಳ ವಯೋಮಿತಿ 60 ರಿಂದ 65 ವರ್ಷವರೆಗೆ ಇರಬೇಕು (65 ವರ್ಷ ಮೀರಿರಬಾರದು).

4. ಇವರುಗಳ ವಿರುದ್ಧ ಇಲಾಖಾ ಅಥವಾ ನ್ಯಾಯಾಂಗ ವಿಚಾರಣೆ ಬಾಕಿ ಇರಬಾರದು ಅಥವಾ ವಿಚಾರಣೆ ಅಂತಿಮಗೊಂಡ ನಂತರ ಯಾವುದೇ ದಂಡನೆಗೆ ಒಳಪಟ್ಟಿರಬಾರದು.
5. ಆಯ್ಕೆಯಾಗುವ ನಿವೃತ್ತ ಸಹಾಯ/ಕಿರಿಯ ಅಭಿಯಂತರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 313, 314, 315 ಮತ್ತು 316 ರ ಮೇರೆಗೆ ಮಾಸಿಕ ವೇತನ ನಿಗದಿಪಡಿಸಿ ಪಾವತಿಮಾಡಲು ಕ್ರಮವಹಿಸತಕ್ಕದ್ದು.
6. ನಿಗಧಿಪಡಿಸಲಾದಂತಹ ಮಾಸಿಕ ವೇತನವನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು ಸ್ವಂತ ನಿಧಿಯಿಂದ (Municipal Fund) ಪಾವತಿಮಾಡುವುದು. ಇದಕ್ಕಾಗಿ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.
7. ಈ ಪುನರ್ ನೇಮಕಾತಿಯು ತಾತ್ಕಾಲಿಕವಾಗಿ 12 ತಿಂಗಳ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ. ಈ ಮಧ್ಯೆ ಸದರಿ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಅದಂತಹ ಅಭ್ಯರ್ಥಿಗಳು ಅಥವಾ ವರ್ಗಾವಣೆ ಮೂಲಕ ಅಥವಾ ಮುಂಬಡ್ತಿ ಮೂಲಕ ಭರ್ತಿ ಮಾಡಿ ಸದರಿಯವರು ಕರ್ತವ್ಯಕ್ಕೆ ಹಾಜರಾಗುವರೆಗೆ ಯಾವುದು ಮುಂಚೆಯೋ ಅಲ್ಲಿಯವರೆಗಿನ ಅವಧಿಗೆ ಮಾತ್ರವಾಗಿರುತ್ತದೆ.
8. ಪುನರ್ ನೇಮಕಾತಿಗೆ ಆಯ್ಕೆಯಾದಂತಹ ನಿವೃತ್ತ ಕಿರಿಯ/ಸಹಾಯಕ ಅಭಿಯಂತರರುಗಳು ಕರ್ತವ್ಯಕ್ಕೆ ಹಾಜರಾಗುವ ಮುನ್ನಾ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
9. ಪುನರ್ ನೇಮಕಾತಿಗೆ ಆಯ್ಕೆಯಾದ ಬಳಿಕ ಯಾವ ಸ್ಥಳಕ್ಕೆ ನಿಯುಕ್ತಿಗೊಳಿಸಲಾಗುತ್ತದೆಯೋ ಆ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕು. ಯಾವುದೇ ಬದಲಾವಣೆಗೆ ಕೋರಿಕೆಗಳನ್ನು ಪರಿಗಣಿಸುವುದಿಲ್ಲ.
10. ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷತೆ/ದುರ್ವತನೆಯಿಂದ ವರ್ತಿಸಿದಲ್ಲಿ ಅಥವಾ ಮೇಲಾಧಿಕಾರಿಗಳು /ಕಛೇರಿ ಮುಖ್ಯಸ್ಥರು ನೀಡುವ ಸೂಚನೆ ಮತ್ತು ಸಲಹೆಗಳನ್ನು ಪಾಲಿಸದೆ ಇದ್ದಲ್ಲಿ ಈ ಸಂಬಂಧ ನಗರ ಸ್ಥಳೀಯ ಸಂಸ್ಥೆಗಳಿಂದ ವರದಿ ಸ್ವೀಕೃತಿಯಾದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಕರ್ತವ್ಯದಿಂದ ತೆಗೆದುಹಾಕಲಾಗುವುದು. ಇದಕ್ಕಾಗಿ ಯಾವುದೇ ಪರಿಹಾರ ಧನ ನೀಡಲಾಗುವುದಿಲ್ಲ.
11. ಈ ಪುನರ್ ನೇಮಕಾತಿ ಸಂಬಂಧಿಸಿದಂತೆ ಅಥವಾ ಕಾರ್ಯನಿರ್ವಹಣೆ ಬಗ್ಗೆ ಇನ್ನಾವುದೇ ಅಂಶಗಳಿಗೆ ಸರ್ಕಾರದಿಂದಾಗಲಿ, ಪೌರಾಡಳಿತ ನಿರ್ದೇಶನಾಲಯದಿಂದಾಗಲಿ ಅಥವಾ ಜಿಲ್ಲಾಧಿಕಾರಿಗಳಿಂದಾಗಲಿ ಕಾಲ ಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ.
12. ನೇಮಕಾತಿ ಆದೇಶವನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಹೊರಡಿಸತಕ್ಕದ್ದು.

ಮುಂದುವರೆದು, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳೊಂದಿಗೆ ಸಮಾಲೋಚಿಸಿ, ಖಾಲಿ ಇರುವ ಕಿರಿಯ/ಸಹಾಯಕ ಅಭಿಯಂತರರ ಹುದ್ದೆಗಳನ್ನು, ಯೋಜನಾ ನಿರ್ವಹಣಾ ಸಮಾಲೋಚಕರ (PMC) ಮುಖಾಂತರ ಅಥವಾ ನಿವೃತ್ತ ಅಭಿಯಂತರರುಗಳಿಂದ ಭರ್ತಿ ಮಾಡುವ ಬಗ್ಗೆ ಮೇಲ್ವಿಚಾರಣೆ ಮಾಡಲು ಮತ್ತು ನಗರಾಭಿವೃದ್ಧಿ ಇಲಾಖೆಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿದ್ಧಿಕ್ ಪಾಷ) 28/10/16
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ(ಎಂ.ಎ-1)

**ಇವರಿಗೆ:**

1) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು.

2) ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
3) ರಾಜ್ಯದ ಎಲ್ಲಾ ಜಿಲ್ಲೆಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ (ಸಂಬಂಧಪಟ್ಟ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ, ಯೋಜನಾ ನಿರ್ದೇಶಕರ ಕಛೇರಿ ಮುಖಾಂತರ).

**ಪ್ರತಿ ಮಾಹಿತಿಗಾಗಿ:**

1) ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ.